## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ. ನಂ. 1898/2025**

ಸಿ.ಡಬ್ಲ್ಯು: 2

ಪಿ.ಡಬ್ಲ್ಯು: 6

| | | |
|---|---|---|
| ಸಾಕ್ಷಿದಾರರ ಹೆಸರು | – | ಕಾರ್ತಿಕ ಬಾನಾವಳಿಕರ |
| ತಂದೆಯ ಹೆಸರು | – | ವಿಜಯ ಬಾನಾವಳಿಕರ |
| ವಯಸ್ಸು | – | 27 ವರ್ಷ |
| ಉದ್ಯೋಗ | – | ಮೀನುಗಾರಿಕೆ |
| ವಾಸ್ತವ್ಯ | – | ಹಾರವಾಡ, ಕಾರವಾರ |

ದಿನಾಂಕಃ 27-04-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ಸುಮಾರು 7 ತಿಂಗಳ ಹಿಂದೆ ಪೋರ್ಟ ಹತ್ತಿರ ಆರೋಪಿಯನ್ನು ಪೊಲೀಸರು ಹಿಡಿದುಕೊಂಡಿದ್ದರು. ಆತನ ಬಳಿ ಸಾರಾಯಿ ಬಾಟಲಿಗಳಿದ್ದವು. ಪೊಲೀಸರು ಅವುಗಳನ್ನು ತೆಗೆದುಕೊಂಡು ಬಂದರು. ಅಲ್ಲಿಯೇ ನನ್ನ ಸಹಿ ತೆಗೆದುಕೊಂಡಿದ್ದಾರೆ. ಅದೇ ಸ ಮಯದಲ್ಲಿ ನನ್ನ ಭಾವ ಚಿತ್ರವನ್ನು ತೆಗೆದುಕೊಂಡಿದ್ದಾರೆ. ಸಾಕ್ಷಿ ಮಹಜರ್ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಈಗಾಗಲೇ ಮಹಜರ್ ನ್ನು ನಿ.ಪಿ. 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಕಚ್ಚಾ ನಕ್ಷೆಯ ಮೇಲಿರುವ ಸಹಿಯನ್ನು ಸಾಕ್ಷಿ ನೋಡಿ ಈಗಾಗಲೇ ಕಚ್ಚಾ ನಕ್ಷೆಯನ್ನು ನಿ.ಪಿ. 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಸಿ) ಎಂದು ಗುರುತಿಸಲಾಯಿತು. ಭಾವ ಚಿತ್ರವನ್ನು ಈಗಾಗಲೇ ನಿ.ಪಿ. 4 ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.ನಂ. 1 ಎಂದು ಗುರುತಿಸಲಾಗಿದೆ. ಆರೋಪಿಯನ್ನು

ನೋಡಿದರೆ ಗುರುತಿಸುತ್ತೇನೆ. ಆರೋಪಿ ಈ ದಿನ ಗೈರು ಹಾಜರಿದ್ದು, ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದ್ದು ಪುರಸ್ಕರಿಸಲಾಗಿದೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಜಿ.ಎ . ವಕೀಲರಿಂದಃ</u>**

ನಾನು ಸಹಿ ಮಾಡಿದ್ದೇನೆಂದು ಹೇಳಲಾದ ದಾಖಲಾತಿ ಕೈ ಬರಹದಲ್ಲಿ ಇತ್ತು ಎಂದರೆ ಸರಿ. ಪೊಲೀಸರು ಒಂದೇ ಸಹಿಯನ್ನು ತೆಗೆದುಕೊಂಡಿದ್ದಾರೆ. ಪೊಲೀಸ ಠಾಣೆಗೆ ಕರೆದು ನನ್ನ ಸಹಿ ತೆಗೆದುಕೊಂಡಿಲ್ಲ. ಪೊಲೀಸರು ನಿಪಿ 2 ರಲ್ಲಿ ಏನು ಬರೆದಿದ್ದಾರೆಂದು ಓದಿ ನೋಡಿಲ್ಲ . ನಿಪಿ 2 ರಲ್ಲಿ ಏನು ಬರೆದಿದ್ದಾರೆ ಎಂದು ಓದಿ ನೋಡಿಲ್ಲ ಎಂದರೆ ಸರಿ. ಪೋಲಿಸರು ಸಹಿ ಹಾಕು ಎಂದು ಹೇಳಿದ್ದಕ್ಕೆ ಹಾಕ್ಕಿದ್ದೇನೆಂದರೆ ಸರಿ. ನನ್ನ ಸಮಕ್ಷಮ ಯಾವುದೇ ಮುದ್ದೆ ಮಾಲುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿ. ಮುದ್ದೆ ಮಾಲು 1 ನ್ನು ಪೋಲಿಸರು ಎಲ್ಲಿಂದ ತೆಗೆದುಕೊಂಡು ಬಂದಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಭಾವ ಚಿತ್ರ ತೆಗೆದುಕೊಂಡು, ಸಹಿ ಹಾಕು ಎಂದು ಹೇಳಿದ್ದಕ್ಕೆ ಸಹಿ ಹಾಕಿದ್ದೇನೆ ಎಂದರೆ ಸರಿ. ಅದನ್ನು ಬಿಟ್ಟು ಬೇರೇನು ವಿಷಯ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿ
ಕಾರವಾರ